## ಸಮುದ್ರ ಮಥನ

### ಸ್ವಂತ ಮನೆಯ ಸಮಗ್ರ ವಿವರ

ಜುಲೈ 11 ಸಂಚಿಕೆಯಲ್ಲಿ ಹತ್ತು ಪುಟಗಳೊಂದಿಗೆ ಪ್ರಕಟವಾದ ಕರ್ಕಿ ಕೃಷ್ಣಮೂರ್ತಿ ಅವರ 'ಸ್ವಂತ ಮನೆ' ಲೇಖನ ತುಂಬಾ ಹಿಡಿಸಿತು. ಮನೆ ಕಟ್ಟುವ ಕುರಿತು ಸರಿಯಾದ ಮಾಹಿತಿ ಸಿಗದೆ ಮೇಸ್ತ್ರಿಗಳನ್ನು ಅವಲಂಬಿಸಬೇಕಾಗಿತ್ತು. ಇಂಗು ನೀರಿನ ಬಗ್ಗೆಯೂ ಸಾಕಷ್ಟು ಮಾಹಿತಿ ಇದೆ. ವಸ್ತುಗಳ ಗುಣಮಟ್ಟ, ಜಲ್ಲಿ, ಸಿಮೆಂಟು, ಕಬ್ಬಿಣ ಹೀಗೆ ಎಲ್ಲ ವಿಷಯಗಳನ್ನೂ ಹಂತಹಂತವಾಗಿ ವಿವರಿಸಿದ್ದಾರೆ. ಇದು ಉಪಯುಕ್ತ ಲೇಖನ.

—ಅಂಚೆ ಸುಬ್ರಹ್ಮಣ್ಯ ಕೊಪ್ಪ, ಎಸ್.ವಿ. ಜಯಕುಮಾರಿ ಬೆಂಗಳೂರು, ಶ್ರುತಿ ರಿಗ್ರೆಟ್ ಅಯ್ಯರ್ ಬೆಂಗಳೂರು, ಆನಂದ್ ಕುಮಾರ್ ಚಿತ್ರದುರ್ಗ, ಪಿ. ಗೋವಿಂದರಾಜ ಶಿವಮೊಗ್ಗ

### ಚಳ್ಳೆಹಣ್ಣಿನ ಕಥೆ

ಜುಲೈ 4ರ ಸಂಚಿಕೆಯ 'ನಿಮ್ಮ ಪುಟ'ದಲ್ಲಿ ಜಿ. ಅರ್ಚನಾ ಅವರು ಬರೆದಿರುವ ಟಿಪ್ಪಣಿ ಓದಿ, ಮೋಸ, ಒಳಸಂಚು ಎಂಬುದಕ್ಕೆ ಇನ್ನು ಮುಂದೆ 'ಚಳ್ಳೆಹಣ್ಣು ತಿನ್ನಿಸುವುದು' ಎಂಬ ನುಡಿಗಟ್ಟನ್ನು ಬಳಸಬಾರದು ಎಂಬ ಎಚ್ಚರಿಕೆ ಮೂಡಿತು. ಇಂಥದ್ದೊಂದು ಪ್ರತೀಕ ಯಾರಿಂದ ಬಂತೋ ಗೊತ್ತಿಲ್ಲ.

—ನಾಗರಾಜ, ಹುಬ್ಬಳ್ಳಿ

### ಸೂಪರ್ಬ್ ಸಂಚಿಕೆ

ಜುಲೈ 4ರ ಸಂಚಿಕೆಯನ್ನು ಓದಿದೆ. ಸೂಪರ್ಬ್. ಅಲ್ಲಾ ಸ್ವಾಮಿ, ಒಂದೇ ಪತ್ರಿಕೆಯಲ್ಲಿ ಇಷ್ಟೊಂದು ವೈವಿಧ್ಯದ ಲೇಖನಗಳನ್ನು ಪ್ರಕಟಿಸಿದರೆ ಹೇಗೆ ಅರಗಿಸಿಕೊಳ್ಳುವುದು? ನಿಜಕ್ಕೂ ಸ್ತುತ್ಯಾರ್ಹ ಸಂಚಿಕೆ. ಸುಧಾಳಿಗೆ ಸುಧಾಳೇ ಸಾಟಿ!

—ಬಿಲ್ಲೇಶ್ವರ ಅಚ್ಚು, ಹುಂಚ

ಸುಧಾದಲ್ಲಿ ಬರುವ ಲೇಖನಗಳು ಬಹಳಷ್ಟು ಉತ್ತಮವಾಗಿರುತ್ತವೆ. ಕೀಟ, ಸಸ್ಯ, ಸಾಹಿತ್ಯ, ವೈದ್ಯಕೀಯ ಮುಂತಾದ ವಿಷಯಗಳ ಬಗ್ಗೆ ಬಹಳಷ್ಟು ಮಾಹಿತಿ ಸಿಗುತ್ತಿದೆ. ಇತ್ತೀಚೆಗೆ ಗಮನಿಸಿದಂತೆ ಲೇಖನಗಳಿಗೆ ಪೂರಕವಾದ ಚಿತ್ರಗಳು ಬಹಳ ಉತ್ತಮವಾಗಿ ಬರುತ್ತಿವೆ. ಕಥೆ, ಪ್ರಬಂಧ, ಹಾಸ್ಯ ಲೇಖನಗಳಿಗೆ ಚಿತ್ರಗಳು ಮನಮೋಹಕವಾಗಿರುತ್ತವೆ.

—ಹರೀಶ ಬಿ.ಜಿ. ದಾವಣಗೆರೆ

### ಅತೀಂದ್ರಿಯದ ಅಮಲಿನಲ್ಲಿ

ಪ್ರಭಾಕರ ಶಿಶಿಲ ಅವರ ಕಥನ 'ಅತೀಂದ್ರಿಯದ ಅಮಲಿನಲ್ಲಿ' ತುಂಬಾ ಇಷ್ಟವಾಯ್ತು. ಸಮಾಜದಲ್ಲಿ ಇರುವ ಡೋಂಗಿ ಆಧ್ಯಾತ್ಮಿಕ ಗುರುಗಳು ಮೂಲ ಉದ್ದೇಶ ಹಣಗಳಿಕೆಯೊಂದೆ. ಓಂಕಾರ ಹೇಳುವಾಗ ಸಿಗುವ ಅನುಭೂತಿ ಈ ಅತೀಂದ್ರಿಯ ಧ್ಯಾನದಲ್ಲಿ ಸಿಗುವುದಿಲ್ಲ ಏನು ಮಾಡಲಿ ಎಂದು ಕೇಳಿದಾಗ ತಬ್ಬಿಬ್ಬಾಗುವ, ಅದಕ್ಕೆ ಕಾಟಾಚಾರಕ್ಕೆ ಕೊಡುವ ಉತ್ತರ ರೂಪ ಎಲ್ಲವನ್ನೂ ಎಳೆಎಳೆಯಾಗಿ ಹೇಳಿದ್ದಾರೆ. ಹಣ ಸಂಪಾದನೆಯ ಮೂಲ ಗುರಿಯಾಗಿಸಿಕೊಂಡು ನಡೆಸುವ ಈ ಕಾರ್ಯಕ್ಕೆ ಆಧುನಿಕ ಯುಗದಲ್ಲಿ ಮುಗಿಬೀಳುವ ಜನರೂ ಎಚ್ಚೆತ್ತುಕೊಂಡರೆ ಒಳಿತು ಎಂಬ ಸಂದೇಶ ಹೊತ್ತ ಕಥನ ಇಷ್ಟವಾಯ್ತು.

—ರಾಜು ಹಗ್ಗದ, ವಿಜಯಪುರ

### ಮಾಡೆಲಿಂಗ್ ಕುರಿತು ಉತ್ತಮ ಲೇಖನ

ಜುಲೈ 11ರ ಸಂಚಿಕೆಯಲ್ಲಿ ಸಿ. ಶಶಿಕುಮಾರ್ ಅವರು ಬರೆದ 'ಮಾಡೆಲಿಂಗ್ ಸೌಂದರ್ಯದ ಮೇಲಷ್ಟೇ ನಿಂತಿಲ್ಲ' ಎಂಬ ಲೇಖನ ಚೆನ್ನಾಗಿದೆ. ಕೋಮಿಕ ಸಿನ್ಹ ಅವರು ಅಳವಡಿಸಿಕೊಂಡಿರುವ ದೇಹದ ಬಗೆಗಿನ ಕಾಳಜಿ ಮೆಚ್ಚುವಂಥದ್ದು. ಅಲ್ಲದೆ ಅವರು ಹೇಳಿರುವ 'ಸೌಂದರ್ಯವಷ್ಟೇ ಮುಖ್ಯವಲ್ಲ' ಎಂಬುದು ಮೆಚ್ಚತಕ್ಕ ಮಾತು.

—ಎನ್.ಎಸ್. ಚಂದ್ರಶೇಖರ್, ನಾ.ಕು. ಗಣೇಶ್, ಬೆಂಗಳೂರು

### ಟೋಟೋ ಪುರಸ್ಕಾರ 2020

ಕನ್ನಡದ ಸೃಜನಶೀಲ ಯುವ ಬರಹಗಾರರಿಗೆ ಮೀಸಲಾದ 2020ನೇ ಸಾಲಿನ ಟೋಟೋ ಪುರಸ್ಕಾರಕ್ಕಾಗಿ ಟೋಟೋ ಸಂಸ್ಥೆಯು ಪ್ರವೇಶಗಳನ್ನು ಆಹ್ವಾನಿಸುತ್ತಿದೆ. ಈ ಪುರಸ್ಕಾರವು 50,000 ರೂಪಾಯಿಗಳ ನಗದು ಬಹುಮಾನವನ್ನು ಒಳಗೊಂಡಿದೆ.

ಬರಹಗಳನ್ನು ಕಳುಹಿಸುವವರು ಭಾರತೀಯ ನಾಗರಿಕರಾಗಿರಬೇಕು (ಓವರ್ಸೀಸ್ ಸಿಟಿಜನ್ ಆಫ್ ಇಂಡಿಯಾ ಚೀಟಿ ಉಳ್ಳವರು ಪ್ರವೇಶಕ್ಕೆ ಅರ್ಹರಾಗಿರುವುದಿಲ್ಲ). ಹಾಗೂ 18 ರಿಂದ 29 ವರ್ಷ ವಯಸ್ಸಿನವರಾಗಿರಬೇಕು. ಕಥೆ, ಕವಿತೆ ಮತ್ತು ನಾಟಕ ಈ ಮೂರರಲ್ಲಿ ಯಾವುದೇ ಪ್ರಕಾರದಲ್ಲಿಯಾದರೂ ಪ್ರವೇಶಗಳನ್ನು ಕಳಿಸಬಹುದು. ಈ ಮೂರು ಪ್ರಕಾರಗಳಿಂದ ಒಬ್ಬರನ್ನು ಪುರಸ್ಕಾರಕ್ಕಾಗಿ ಆಯ್ಕೆ ಮಾಡಲಾಗುತ್ತದೆ. ಈ ಆಯ್ಕೆಯನ್ನು ಕನ್ನಡದ ಹಿರಿಯ ಬರಹಗಾರರ ಸಮಿತಿಯು ಮಾಡಲಿದೆ.

ಪ್ರವೇಶಗಳನ್ನು ಕಳುಹಿಸಲು ಕೊನೆಯ ದಿನಾಂಕ: 27 ಆಗಸ್ಟ್, 2019

ವಿವರಗಳಿಗಾಗಿ ನೋಡಿ: **http://totofundsthearts.blogspot.in/**

ವಿಳಾಸ: ಟೋಟೋ ಫಂಡ್ಸ್ ದ ಆರ್ಟ್ಸ್ (ಟಿಎಫ್‌ಎ), ಎಚ್ 301, ಆದರ್ಶ ಗಾರ್ಡನ್ಸ್, 8ನೇ ಬ್ಲಾಕ್, 47ನೇ ಕ್ರಾಸ್, ಜಯನಗರ, ಬೆಂಗಳೂರು–560082

ದೂರವಾಣಿ: 080 26990549

### ಮಹಾರಾಜ ರಾಜಾಶಂಕರ್

ಜುಲೈ 11ರ ಸಂಚಿಕೆಯಲ್ಲಿ ಲಹರಿ ವಿಭಾಗದಡಿ ಪ್ರಕಟಗೊಂಡ ಮಲ್ಲಿಕಾರ್ಜುನ ಹೊಸಪಾಳ್ಯ ಅವರ 'ರಾಜ್‌ಕುಮಾರ್ ಮತ್ತು ರಾಗಿರೊಟ್ಟಿ' ಎಂಬ ಲೇಖನದಲ್ಲಿ 'ಬಹದ್ದೂರ್ ಗಂಡು' ಚಿತ್ರದಲ್ಲಿ ಮಹಾರಾಜರಾಗಿ ಉದಯಕುಮಾರ್ ನಟಿಸಿದ್ದಾರೆ ಎಂಬ ಉಲ್ಲೇಖವಿದೆ. ಈ ಚಿತ್ರದಲ್ಲಿ ನಟಿಸಿರುವ ಕಲಾವಿದರು ರಾಜಾಶಂಕರ್, ಉದಯಕುಮಾರ್ ಅಲ್ಲ.

—ಶಿ.ರ.ಮಯೂರನಾಥ್, ಬೆಂಗಳೂರು

### ಯಾವುದು ಒಳ್ಳೆಯ ಎಣ್ಣೆ?

ಜುಲೈ 4ರ ಸಂಚಿಕೆಯಲ್ಲಿ 'ಅಡುಗೆ ಎಣ್ಣೆ ಖರೀದಿಸುವ ಮುನ್ನ' ಎಂಬ ಲೇಖನದಲ್ಲಿ ಎಣ್ಣೆ ಬಳಕೆಯ ಬಗ್ಗೆ ಜಾಗರೂಕರಾಗಿರಬೇಕು ಎಂದು ತಿಳಿಸಿದ್ದಾರೆ. ಆದರೆ ಈಗ ಮಾರುಕಟ್ಟೆಯಲ್ಲಿ ಲಭ್ಯವಿರುವ ಹತ್ತು ಹದಿನೈದು ಥರದ ಬ್ರ್ಯಾಂಡ್ ಎಣ್ಣೆಗಳಲ್ಲಿ ಯಾವುದರಲ್ಲಿ ವೈದ್ಯರು ತಿಳಿಸಿರುವಂತೆ ಫ್ಯಾಟ್ ಕಡಿಮೆ ಇದೆ? ಹೃದಯಕ್ಕೆ ಹಾನಿ ಮಾಡದಿರುವ ಎಣ್ಣೆ ಯಾವುದು ಎಂಬುದನ್ನು ತಿಳಿಸಿಲ್ಲ. ಈ ಮಾಹಿತಿ ಇಲ್ಲದೆ ಲೇಖನ ಹೇಗೆ ಉಪಯುಕ್ತವಾಗುತ್ತದೆ?

—ನಾಗರಾಜ, ಅರಸೀಕೆರೆ

### ಉತ್ತಮ ಪ್ರವಾಸ ಕಥನ

ಜುಲೈ 11ರ ಸಂಚಿಕೆಯಲ್ಲಿನ 'ಮೌಂಟ್ ಕೀನ್ಯಾ ಅಪೂರ್ವ ನಿಧಿ ಗಾರೆ ಡಾರೆ' ಲೇಖನವನ್ನು ಸುಕನ್ಯಾ ಸೂನಗಹಳ್ಳಿ ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ. ನಾವೇ ಪ್ರವಾಸ ಮಾಡಿದ ಅನುಭವ ನೀಡಿತು. ಆಡುಗಳು ನೀರು ಕುಡಿಯುವ ಸ್ಥಳವೇ ಇಷ್ಟೊಂದು ಅದ್ಭುತವಾಗಿರಬೇಕಾದರೆ ಕೀನ್ಯಾ ಇಡೀ ರಾಷ್ಟ್ರ ಹೇಗಿರಬಹುದು?

—ಕಾಳಿಹುಂಡಿ ಕೆ. ವಿ. ಶಿವಕುಮಾರ್ ಮೈಸೂರು, ಪಂಡಿತರಾವ ಪಾಟೀಲ ವಿಜಯಪುರ

### ಕೊನೆಯ ಸಾಲು ಮಾಯ!

ಜುಲೈ 11ರ ಸಂಚಿಕೆಯ ಎಳೆಯರ ಅಂಗಣದ ಚಿಂತಾಮಣಿ ಕೊಡ್ಲೆಕೆರೆ ಕವಿತೆಗಳೆರಡೂ ರಂಜಿಸಿದುವು. 'ಆದರೆ ಕನ್ನಡ ತಾಯಿಯ ಮಕ್ಕಳು ನಾವು' ಕವಿತೆಯ ಕೊನೆಯ ಸಾಲನ್ನು ನುಂಗಿ ಹಾಕಿ ರಸಭಂಗ ಮಾಡಿದ್ದೀರಾ.

—ಶ್ಯಾಮಲಾ ಮಾಧವ, ಮುಂಬೈ

### ಗಿರೀಶರ ಚಿತ್ರಮಾಹಿತಿ

ಜೂನ್ 27ರ ಸಂಚಿಕೆಯಲ್ಲಿ ಮಹತಿ ಬರೆದಿರುವ 'ಆಡಾಡತ ಐದು ಚಿತ್ರ' ಲೇಖನ ಚೆನ್ನಾಗಿತ್ತು. ಗಿರೀಶ ಕಾರ್ನಾಡರ 'ತಬ್ಬಲಿಯು ನೀನಾದೆ ಮಗನೆ' ಚಿತ್ರದ ಹಲವು ದೃಶ್ಯಗಳು ಹೃದಯದಲ್ಲಿ ಇನ್ನೂ ಹಸಿರಾಗಿವೆ.

—ಶ್ರೀನಿವಾಸ ಪದಕಿ, ಮುಂಬೈ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in